Reg No B G 155 3 — 5 — 72

55th Year of Publication ‘Satyavadi Daily, Mysore 4

In the State — The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರವಿಂತ ಎಂ. ಎಸ್. ಕೃಷ್ಣರಾವ್ [2 ಪೈಸ

ಬೆಳಗಾಂ ಗತಿ ಏನಾಗುವುದೋ!

— ಬೆಳಗಾಂ ವಿಭಜನೆಯೆ !

ಬೆಂಗಳೂರು— ಗಡಿ ವಿವಾದದ ವ್ಯವಸ್ಥೆಗೆ ಬೆಳಗಾವಿಯನ್ನು ಎರಡು ಹೋಳು ಮಾಡಿ, ಮೈಸೂರು-ಮಹಾರಾಷ್ಟ್ರಗಳಿಗೆ ಹಂಚಲು ಕೇಂದ್ರ ಯೋಜಿಸಿದೆ ಎಂದು ಪದಂತಿ ಹರಡಿದೆ

★

ಸುಗ್ರೀವಾಜ್ಞೆ

ಹೈದರಾಬಾದು- 4 ಅಥವಾ ಹೆಚ್ಚು ಎಕ್ರೆ ಗದ್ದೆ ಮತ್ತು 10 ಅಥವಾ ಹೆಚ್ಚು ಎಕ್ರೆ ಹೊಲ ಹೊಂದಿರುವವರು ಜಿವುಗಳನ್ನು ವರ್ಗಾಯಿಸುವುದನ್ನು ಪ್ರತಿಬಂಧಿಸಿ ಆಂಧ್ರ ರಾಜ್ಯಪಾಲ ಗೌವರು ಸುಗ್ರೀವಾಜ್ಞೆ ಹೊರಡಿಸಿರುವರು.

★

ಗೋಧಿ ತರ್ಕ

ನವದೆಹಲಿ— ಗೋಧಿ ರಫ್ತಿನ ವಿಷಯ ಪರ್ಯಾಲೋಚಿಸಲಾಗುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

ಟ್ಯಾಂಕ್ ವಿರುದ್ಧ ಕ್ಷಿಪಣಿ

ವಾಷಿಂಗ್ಟನ್— ಅಮೇರಿಕಾ ವಿಯಟ್ನಾಂಗೆ ಟ್ಯಾಂಕು ವಿರುದ್ಧ ಕ್ಷಿಪಣಿಗಳನ್ನು ತರಾತುರಿ ಕಳುಹಿಸಿತು

★

ತಪ್ಪು ತಿಳುವಳಿಕೆ

ಸುರೇಂದ್ರನಗರ— ವಾಧಾನಿಗೆ ಸ್ಥಳೀಯ ಕೈಗಾರಿಕೋದ್ಯೋಮಿ ಪಿಟ್ರೋಡೋ ದೇವರ ದರ್ಶನಕ್ಕೆ ಹೋಗಿದ್ದರು . ಮಧ್ಯದಲ್ಲಿ ಅವರು ಸತ್ತರೆಂಬ ವಾರ್ತೆ ತಿಳಿದು ಸುಸಾರದವರು ಮನೆಗೆ ಒಂದು ಶವ ತಂದರು ; ಆದರೆ ಒಬ್ಬನು ಅಡ್ಡು ತನ್ನ ತಂದೆ ದೇವರ್ಲರದೆಂದ, ಹಕ್ಕು ಒತ್ತಿದನು ; ಅಷ್ಟರಲ್ಲಿ ಪಿಟ್ರೋಡೊರವರು ವಾಧಾನಿನಿಂದ ದೇವರ ದರ್ಶನ ಮಾಡಿಕೊಂಡು ಮನೆಗೆ ವಾಪಸ್ಸು ಬಂದರು ; ಬಿಕ್ಕಟ್ಟು ಪರಿಹಾರವಾಯಿತು ; ಇಬ್ಬರ ರೂಪಿನಲ್ಲಿ ಹೋಲಿಕೆ ಇದ್ದುದೆ ಹೀಗಾಗಲು ಕಾರಣವಾಯಿತು

❁

ಕೈಕೊಟ್ಟ ಮುತ್ತು

ಬೈರೂಟ್— ಇಬ್ಬರು ಸುಂದರ ಲೆಬಾನಿ ಹುಡುಗಿಯರು ಒಂದು ಉಡುಪಿನ ಅಂಗಡಿಗೆ ಹೋದರು : ಒಬ್ಬ ಹುಡುಗಿ ಮಾಲೀಕನನ್ನು ಅಲ್ಲಿಯ ಒಂದು ಕೋಣೆಗೆ ಕರೆದು, ತನಗೆ ಮುತ್ತಿಡಬೇಕೆಂದೂ, ತನ್ನ ಪ್ರೇಮಿಯಾಗಬೇಕೆಂದೂ, ತನ್ನ ಗಂಡ ಒಳ್ಳೆ ಶ್ರೀಮಂತನಾದರೂ ವಯಸ್ಸಾದವನೆಂದೂ ಹೇಳಿ ತನ್ನ ಟೆಲಿಫೋನಿನ ನಂಬರು ಕೊಟ್ಟಳು ; ನಂತರ ಅವನನ್ನು ಚೆನ್ನಾಗಿ ಮುತ್ತು ಕೊಡುತ್ತಿದ್ದಾಗ ನು ತ್ತೊ ಬ್ಬ ಳು ಅಲ್ಲಿ ಸಿಕ್ಕಿದ ರೂ 3000 ಹಣವನ್ನು ದೋಚಿಕೊಂಡಳು : ನಂತರ ಏನೂ ವ್ಯಾಪಾರ ಮಾಡದೆ ಹೊರಟುಹೋದರು : ಮಾಲೀಕನಿಗೆ ಆವೇಲೆ ಇದು ಗೊತ್ತಾಗಿ ಆ ಹುಡುಗಿ ಕೊಟ್ಟದ್ದ ಫೋನ್ ನಂಬರು ನೋಡಲಾಗಿ ಅದು ಹುಚ್ಚಾಸ್ಪತ್ರೆಯದಾಗಿತ್ತು

ರೈಲ್ವೆ ರಿಯಾಯಿತಿ ರದ್ದು

ನವದೆಹಲಿ— ಪೋಲೋ, ಗಾಲ್ಫ್, ರೈಫಲ್ ಶೂಟಿಂಗ್, ನೌಕಾ ಕ್ರೀಡಾ ತಂಡಗಳಿಗಿದ್ದ ರೈಲ್ವೇ ರಿಯಾಯಿತಿ ರದ್ದು ಪಡಿಸಲಾಗಿ ಯೆಂದು ಲೋಕಸಭೆಯಲ್ಲಿ ತಿಳಿಸಲಾಗಿತು

●

ಡಾ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ. ಸಿ. ಮೋದಿ (ಭಾರತಾಧ್ಯಕ್ಷರ ಗೌ॥ ನೇತ್ರ ವೈದ್ಯರು) ಕಾರವಾರ (ಉ. ಕ.) ದಲ್ಲಿ ತಾ॥ 4 ರಂದು ಉಚಿತ ನೇತ್ರ ಆಪರೇಷನ್ ಶಿಬಿರ ನಡೆಸುವರು.

★

ಕಾಲರ

ಮೈಸೂರು— ಮುನಿಸಿಪಲ್ ಕಮಿಷನರರು ಸೋಮವಾರ ಪತ್ರಿಕಾ ಗೋಷ್ಠಿಯಲ್ಲಿ ಕಾಲರಾ ಪರಿಸ್ಥಿತಿ ಹತೋಟಿಯಲ್ಲಿರುವುದಾಗಿಯೂ, ಅದು ತಗ್ಗುತ್ತಿರುವುದೆಂದೂ, 145720 ಜನರಿಗೆ ಇನಾಕ್ಯುಲೇಷನ್ ಮಾಡಲಾಗಿದೆಯೆಂದೂ ತಿಳಿಸಿದರು.

○

ಹಾಕಿ ಪಂಥ

ಬೆಂಗಳೂರು— ಬೊಂಬಾಯಿನಲ್ಲಿ ನಡೆಯುವ ಭಂಗಾರ ಬಟ್ಟಲು ಹಾಕಿ ಪಂಥದಲ್ಲಿ ಮೈಸೂರು ತಂಡ ಭಾಗವಹಿಸುವುದು

●

ರಿಫ್ರೆಷರ್ ಕೋರ್ಸ್

ಮೈಸೂರು— ವಿಶ್ವವಿದ್ಯಾಲಯವು 1972 ರಲ್ಲಿ ಯೂನಿವರ್ಸಿಟಿ ಪಬ್ಲಿಕ್ ಸರ್ವಿಸ್ ಕಮಿಷನ್ ನಡೆಸುವ ಐ ಎ ಎಸ್ ಇತರೆ ಪರೀಕ್ಷೆಗಳಿಗೆ ಚಿಕ್ಕ ಅವಧಿಯ ರಿಫ್ರೆಷರ್ ಕೋರ್ಸ್ ಏರ್ಪಡಿಸಲಿದೆ ; ವಿವರಗಳನ್ನು ವಿಶ್ವವಿದ್ಯಾಲಯದಿಂದ ಪಡೆಯಬಹುದು

★

ನಿರುದ್ಯೋಗ

ನವದೆಹಲಿ— ಇನ್ನು 2 ವರ್ಷಗಳಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಲ್ಲಿ 200 ಮಿಲಿಯ ನಿರುದ್ಯೋಗಿಗಳಿರುವರೆಂದೂ 1980 ರ ಹೊತ್ತಿಗೆ ಇದು 300 ಮಿಲಿಯನ್ ಆಗುವುದೆಂದೂ ವಿಶ್ವಸಂಸ್ಥೆ ನಿಪುಣರ ಸಮಿತಿ ಪ್ರಕಟಿಸಿದೆ.

★

ಪ್ರವಾಸಿಗರಿಂದ ವಿನಿಮಯ

ನವದೆಹಲಿ - 1971 ರಲ್ಲಿ ದೇಶಕ್ಕೆ ಹೊರಟುಕೊಟ್ಟ ಪ್ರವಾಸಿಕರಿಂದ ಭಾರತಕ್ಕೆ ರೂ 40 ಕೋಟಿ ವಿದೇಶೀ ವಿನಿಮಯ ದೊರೆಯಿತು.

○

ಉನ್ನತ ಮಟ್ಟದ ಸಮ್ಮೇಳನ

ನವದೆಹಲಿ — ಭಾರತ-ಪಾಕಿಸ್ತಾನ ಮಧ್ಯೆ ಉನ್ನತ ಮಟ್ಟದ ಸಮ್ಮೇಳನಕ್ಕೆ ಪ್ರಧಾನಿ ಇಂದಿರಾರವರು ಭುಟ್ಟೋಗೆ ತಾರೀಖುಗಳನ್ನು ಸಲಹೆಮಾಡಲಿರುವರು — ಜೂನ್ ಸ್ವಾರಂಭದಲ್ಲಿ ನಡೆಯಬಹುದು.

★

ಪದವೀದಾನ ಸಮಾರಂಭಕ್ಕೆ ಬಹಿಷ್ಕಾರ

ಹೈದರಾಬಾದು- 1000 ಕ್ಕೂ ಹೆಚ್ಚು ಮಂದಿ ವ್ಯವಸಾಯ ಪದವೀದಾರ ನಿರುದ್ಯೋಗಿಗಳು ಒಗ್ಗೆ ಅಲಕ್ಷ್ಯ ನೀತಿ ಪ್ರತಿಭಟಿಸಿ 270 ವಿದ್ಯಾರ್ಥಿಗಳು ವ್ಯವಸಾಯ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭಕ್ಕೆ ಹೋಗಲಿಲ್ಲ

★

ಅಗ್ನಿ ಅನಾಹುತ

ಭುವನೇಶ್ವರ— ಮಧ್ಯಕಣ ಗ್ರಾಮದಲ್ಲಿ ಭೀಕರ ಅಗ್ನಿ ಅನಾಹುತದಲ್ಲಿ 10 ಸಾವಿರ ಗುಡಿಸಲುಗಳು ಸುಟ್ಟುಹೋದವು

○

ಜಾಗೀರ್ ಕಣಿವೆ ಪ್ರಾಣಿಧಾಮ

ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 84.45 ಚದುರ ಮೈಲಿ ಪ್ರದೇಶದಲ್ಲಿ ಜಾಗೀರ್ ಕಣಿವೆ ಪ್ರಾಣಿಧಾಮ ನಿರ್ಮಾಣದ ರೂ 40 ಲಕ್ಷ ಯೋಜನೆ ಸಿದ್ಧವಾಗಿದೆ.

ಹಾಲಿನ ಘಟಕ

ಬೀದರ್ ಜಿಲ್ಲೆಯಲ್ಲಿ – ಹೆಚ್ಚಾಗಿರುವ ಹಸುವಿನ ಹಾಲಿನಿಂದ 'ಪೂರ್ಣ ಘನೀಕೃತ" ಹಾಲನ್ನು ತಯಾರಿಸಲು ಹಾಲಿನ ಘಟಕವೊಂದನ್ನು ಪ್ರಾರಂಭಿಸಬೇಕೆಂದು ಸೂಚಿಸಲಾಗಿದೆ ; ಪ್ರಸ್ತುತ ಹೆಚ್ಚಿನ ಹಾಲನ್ನು ನೆರೆ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಧ್ರಪ್ರದೇಶಕ್ಕೆ ಕಳುಹಿಸಲಾಗುತ್ತಿದೆ. (ಜನಪದ)

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು ತಾ|| 13 ನೇ ಏಪ್ರಿಲ್ 1972

ನಂ ಡಿ ಟಿ ವಿ/23/72-73

ಟೆಂಡರ್ ಪ್ರಕಟಣೆ

ಮೈಸೂರು ಬೋಜ್ಞೋಪಯೋಗಿ ಇಲಾಖೆಯಲ್ಲಿ ಅಂಗೀಕೃತವಾಗಿರುವ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ 5-5-1972 ರ ಮಧ್ಯಾಹ್ನ 4 ಗಂಟೆ ವರೆಗೆ ಈ ಕೆಳಗೆ ಸಹಿ ಮಾಡಿರುವವರಿಂದ ಮೊಹರಾದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಸ್ವೀಕರಿಸಲಾಗುವುದು. ಸ್ವೀಕರಿಸಲಾದ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ತೆರೆಯಲಾಗುವುದು. ಟೆಂಡರ್ ಫಾರಂಗಳ ದರವಾದ ರೂ 10/- ನ್ನು ಪಾವತಿ ಮಾಡಿದ ಬಗ್ಗೆ ಮುನಿಸಿಪಲ್ ಖಜಾನೆಯ ದ್ವಿಪ್ರತಿ ಚಲನ್‌ನನ್ನು ಹಾಜರು ಪಡಿಸಿದಲ್ಲಿ **4-5-1972** ರ ವರೆಗೆ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಮುನಿಸಿಪಲ್ ಖಜಾನೆಗೆ ಇ. ಎಂ ಡಿ. ಯನ್ನು ನಗದಾಗಿ ಮಾತ್ರ ಪಾವತಿ ಮಾಡಬೇಕು. ಚಕ್, ಪಾಯಂ ರೇವಣಾತಿ ಇತ್ಯಾದಿಗಳ ಮೂಲಕ ಯಾವುದೇ ವಿಧವಾಗಿ ಪಾವತಿ ಮಾಡಿದರೂ ಅದು ಅಂಗೀಕರಿಸಲ್ಪಡುವುದಿಲ್ಲ. ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನಷ್ಟೆ ಯಾವುದೇ ಕಾರಣ ಕೊಡದೆ ನಿರಾಕರಿಸುವ ಹಕ್ಕು ಟೆಂಡರ್ ಒಪ್ಪಿಕೊಳ್ಳಲು ತಕ್ಕ ಅಧಿಕಾರವುಳ್ಳ ಅಧಿಕಾರಿಯವರಿಗೆ ಇರಿಸಲಾಗಿದೆ. ಇತರ ಷರತ್ತುಗಳು ಮಾಮೂಲಿನಂತೆ.

ಈ ಕೆಲಸದ ಹೆಸರು ನಂ	ಟೆಂಡರ್ ಮೊತ್ತ	ಇ ಎಂ ಡಿ	ಕಾಲಾವಧಿ	ಕಂಟ್ರಾಕ್ಟರ್ ಹಗರ್
1 ಡಿ. ಕೆ. ರಸ್ತೆಯ ಗಾಡಿ ಚೌಕದಲ್ಲಿ ಅನೇಕ ಮಹಡಿ ಕಟ್ಟಡ ನಿರ್ಮಿಸುವುದು.	80,500/-	2012/-	10 ತಿಂಗಳು	3 ಮತ್ತು ಮೇಲ್ಪಟ್ಟು
2 ಆಕ್ಟ್ರಾಯಿ ಕಚೇರಿ ಕಾಂಪೌಂಡ್‌ನಲ್ಲಿ ಗೋಡೌನ್ ನಿರ್ಮಾಣದ ಉಳಿಕೆ ಕೆಲಸ ಮಾಡುವುದು	30,000/-	750/-	6 ತಿಂಗಳು	4 ಮತ್ತು ಮೇಲ್ಪಟ್ಟು

ಸಹಿ/- ಕೆ. ಎಸ್. ಸಿದ್ದಲಿಂಗಪ್ಪ,
ಮುನಿಸಿಪಲ್ ಎಕ್ಸಿಕ್ಯುಟೀವ್ ಇಂಜಿನಿಯರ್,
ಸಿ. ಎಂ. ಸಿ., ಮೈಸೂರು.

Contribute Liberally

to the National Defence Fund

ವುಡ್‌ಲ್ಯಾಂಡ್ 28-4-72 ರಿಂದ ಅಮೋಘ 2ನೇ ವಾರ

ವರ್ಣರಂಜಿತ ಹಿಂದಿ ಚಿತ್ರ

ಮೇರೆ ಹಮ್‌ಸಫರ್

ಪಾತ್ರ : ಜಿತೇಂದ್ರ, ಶರ್ಮಿಳಾ ಟಾಗೂರ್, ಬಾಲರಾಜ ಸಹಾನಿ

ನಿರ್ದೇಶನ – ದುಲಾಲ್ ಗುಹ ಸಂಗೀತ – ಕಲ್ಯಾಣಜಿ ಆನಂದಜಿ

ಪ್ರತಿದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ನಂದಾದೀಪ

ಅಪೆರಾ 3 ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವತ್ಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

SHAKTI SUDHA

A Superb Tonic

A Large Range of Daily Wear

Cotton Voile etc., Sarees

in up – to – Date Designs

VISIT: **Bank Road Bahusar**

Protect the Cow

Edited Printedand Published by Dharmapracharaniratа
M S Krishna Rao (Proprietor) at the Satyavadi Press
Chamarajapuram Mysore 4